(ಗೊಂದಲ)

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು): ರಾಷ್ಟ್ರೀಯ ಹೆದ್ದಾರಿ–50, ವಿಜಾಪುರ – ಹುನಗುಂದ – ಹೊಸಪೇಟೆ ರಸ್ತೆಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿಪಡಿಸಲಾಗಿದೆ. ಸದರಿ ರಸ್ತೆಯ ವಿಜಾಪುರ–ಹುನಗುಂದ ಭಾಗದಲ್ಲಿ ನಾಲ್ಕು ಪಥಗೊಳಿಸುವ ಕಾಮಗಾರಿಯು ಪೂರ್ಣಗೊಂಡಿದ್ದು, ಗುತ್ತಿಗೆ ಕರಾರಿನಂತೆ 3.90 ಕಿ.ಮೀ. ಉದ್ದದ ಸರ್ವಿಸ್ ರಸ್ತೆಯನ್ನು, ರಸ್ತೆಯ ಇಕ್ಕೆಲಗಳಲ್ಲಿ ನಿರ್ಮಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ–50 ಹುನಗುಂದ–ಹೊಸಪೇಟೆ ಭಾಗದ ರಸ್ತೆಯನ್ನು ಚತುಷ್ಪಥಗೊಳಿಸುವ ಕಾಮಗಾರಿ ಸಹ ಪೂರ್ಣಗೊಂಡಿದ್ದು, ಗುತ್ತಿಗೆ ಕರಾರಿನಂತೆ ಹೆದ್ದಾರಿಯ ಎಡಭಾಗದಲ್ಲಿಲ ಮತ್ತು ಬಲ ಭಾಗದಲ್ಲಿ 12,925 ಕಿಮೀ. ಉದ್ದದ ಸರ್ವಿಸ್ ರಸ್ತೆಯನ್ನು ಮತ್ತು 13.37 ಕಿಮೀ. ಸರ್ವಿಸ್ ರಸ್ತೆಯನ್ನು ನಿರ್ಮಿಸಲಾಗಿದೆ.

ಅಧ್ಯಕ್ಷರು: ಮಾನ್ಯ ಪ್ರಕಾಶರವರು

5. ವಿಷಯ: ರಜ್ಯದಲ್ಲಿ ಬಿ.ಇಡಿ., ವ್ಯಾಸಂಗ ಮಾಡಲು ಬಯಸಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಸರ್ಕಾರದಿಂದ ಅನುಮತಿ ನೀಡದಿರುವುದರಿಂದ ತೊಂದರೆ ಉಂಟಾಗಿರುವ ಬಗ್ಗೆ.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರಿಗೆ ಉತ್ತರವನ್ನು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: House order ನಲ್ಲಿದ್ದಂತಹ ಸಂದರ್ಭದಲ್ಲಿ ಸದನ ನಡೆಸಿ, ಸರ್ಕಾರ ನಡೆಸುವಂಥದ್ದು, ಸರಿಯಲ್ಲ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು): ಎನ್.ಸಿ.ಟಿ.ಇ. ನಿಯಮಾವಳಿ 2014ರನ್ವಯ ಬಿ.ಇಡಿ ಕೋರ್ಸುಗಳ ಚಾಲ್ತಿಯಲ್ಲಿರುವ ಒಂದು

ವರ್ಷದ ವ್ಯಾಸಂಗದ ಅವಧಿಯನ್ನು ಎರಡು ವರ್ಷಕ್ಕೆ ವಿಸ್ತರಿಸಲಾಗಿದೆ. ಅದರಂತೆ ರಾಜ್ಯ ಸರ್ಕಾರವು ಎನ್.ಸಿ.ಟಿ.ಇ. ನಿಯಮಾವಳಿ 2014ರಂತೆ ಬಿ.ಇಡಿ ವ್ಯಾಸಂಗವನ್ನು ಎರಡು ವರ್ಷಕ್ಕೆ ವಿಸ್ತರಿಸುವಂತೆ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ನಿರ್ದೇಶನ ನೀಡಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪ್ರಾರಂಭಿಸಲು ಸೂಚಿಸಲಾಗಿದೆ.

ಅಧ್ಯಕ್ಷರು: ಶ್ರೀ ಶಿವಾನಂದ ಎಸ್.. ಪಾಟೀಲ್ ಕೇಳಿ.

(ಗೊಂದಲ)

6. **ವಿಷಯ: ಬಸವನಬಾಗೇವಾಡಿ ಕ್ಷೇತ್ರದಲ್ಲಿ 2013–14 ಮತ್ತು 2014–15ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ 4702 ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಗಳಡಿಯಲ್ಲಿ ಕೊಳವೆ ಬಾವಿಗಳ ಮೂಲಕ ನೀರಿನ ಸೌಲಭ್ಯ ಕಲ್ಪಿಸುವುದಕ್ಕಾಗಿ ಆಯ್ಕೆ ಮಾಡಲಾದ ಫಲಾನುಭವಿಗಳಿಗೆ ಇದುವರೆಗೆ ಕೊಳವೆ ಬಾವಿಗಳನ್ನು ಕೊರೆದು ನೀರಿನ ಸೌಲಭ್ಯ ಕಲ್ಪಿಸದಿರುವ ಬಗ್ಗೆ.**

ಅಧ್ಯಕ್ಷರು: ಮಾನ್ಯ ಶಿವಾನಂದ ಎಸ್. ಪಾಟೀಲ್‌ರವರಿಗೆ ಉತ್ತರವನ್ನು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು): 2013–14ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಒಟ್ಟು 17 ಕಾಮಗಾರಿಗಳು ರೂ. 140.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಎಲ್ಲ ಕಾಮಗಾರಿಗಳಿಗೆ ಬೊರ್‌ವೆಲ್ ಕೊರೆಯಲಾಗಿದೆ. ಈ ಪೈಕಿ 13 ಕಾಮಗಾರಿಗಳಿಗೆ ಸೋಲಾರ ಪಂಪ ಅಳವಡಿಸಿ 22.07 ಹೆಕ್ಟೇರ್‌ಗಳ ಕ್ಷೇತ್ರದ 13 ಫಲಾನುಭವಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಬಾಕಿ 4 ಕಾಮಗಾರಿಗಳಿಗೆ ಸೌರಶಕ್ತಿ ಪಂಪ ಅಳವಡಿಸಲು ಶಕ್ಯತೆಯಿಲ್ಲದ ಕಾರಣ ಬದಲಾಗಿ ವಿದ್ಯುತ್ ಸಂಪರ್ಕ ಅಳವಡಿಸಲಾಗುತ್ತಿರುವುದರಿಂದ